ಮೈಸೂರ ಗೆಜೆಟ್.

ನಂ. 45 ಸರ್ಕಾರದಿಂದ ಪ್ರಯಿಷ್ ಆದ್ದು. ಸನ 1889.

ಬೆಂಗಳೂರು, ಶನಿವಾರ, ನವೆಂಬರ್ ತಾ|| 9, ಸನ 1889.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬ್ಯೆ ಅದಕ್ಕೆ ದೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಣಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕಸ್ ಆಫಿಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜ್‌ರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟಿ ಜಡ್ಜ್‌ರು, ಪೊಲೀಸ್ ಸೂಪರ್ಣಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸುಗಳು.

3ನೇ ಭಾಗ–ಶ್ರೀಮಂ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇರ್ಷಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

1ನೆ ಭಾಗ.

ಶ್ರೀಮಂಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 20ನೇ ಅಕ್ಟೋಬರ್ 1889.

ಕ್ಯಾಂಪ್ ನಂ. 666.—ಖಿಜಾನಾ ಬಕ್ಷಿ ವೆಂ|| ಎ. ವೀರಾಸಾಮಿ ಮೊದಲ್ಯಾರ್ರು ಬೆಂಗಳೂರು ಷಹರಿನ ಮ್ಯುನಿಸಿಪಲ್ ಕಮ್ಮಿಷನರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 22ನೇ ಅಕ್ಟೋಬರ್ 1889.

ಕ್ಯಾಂಪ್ ನಂ. 639.—ಜೆ. ಹನುವರ್ಷಾಕಿಂಗ್ ಯಲ್. ಯಂ. ಯಸ್. ಯವರು, ಯಲ್. ಯಂ. ಯಸ್. ಪರೀಕ್ಷೆಯಲ್ಲಿ ತೇರ್ಗಡೆ ಯಾದ ತಾರೀಖು ಲಾಗಾಯುತು ಜೂನಿಯಿ 3ನೇ ಗ್ರೇಡಿನಿಂದ 1ನೇ ಗ್ರೇಡಿನ ಅಸ್ಸಿಟಲ್ ಅಸಿಸ್ಟೆಂಟರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 7ನೇ ಅಕ್ಟೋಬರ್ 1889.

ನಂ. 208.—ಮುಳಬಾಗಲ್ ತಾಲ್ಲೂಕು ಪೈಕಿ ಕೆಲವು ಗ್ರಾಮಗಳನ್ನ ಅಜಾಬಾಜಾ ಗ್ರಾಮಗಳಿಗೆ ಕೀರಿಸೋಣಾಗುವಂತಾ ತಪೀಲ್‌ಕಂಡ ಇದರಡಿ ಬರುವ ತಬ್ದೆಯನ್ನ ಪ್ರಕಟಪಡಿಸೋಣಾಗಿರುತ್ತದೆ.

ಮೂಗಣಿ ಹೆಸರು.	ನಂಬರ್.	ಕಾಯಂ ಯಿಡಲ್ಪಟ್ಟ ಗ್ರಾಮಗಳ ಹೆಸರು.	ನಂಬರ್.	ನೇ ಜಿಲ್ಲೆಯಲ್ಲಿ ನವೂದಾದ ಗ್ರಾಮಗಳಿಗೆ ಕೇರಿಸಿಬಿಡೋಣಾದ ಗ್ರಾಮಗಳ ಹೆಸರು.
1	2	3	4	5
ಬೈರಕೂರು ..	1	ದೊಡ್ಡ ಅತ್ತಿಹಳ್ಳಿ ..	1	ಕುಂಬಳಕುಂಟೆ
			2	ಚಿಕ್ಕಹತ್ತಿಹಳ್ಳಿ
			3	ಉಪ್ಪರದೊಡ್ಡಿ
	2	ಚಾಂದಮೂನಹಳ್ಳಿ ..	1	ಕಲಿಯುಗಲಕ್ಷ್ಮಿಪುರ
	3	ಕಾಗಲವೆಟ್ಟ ..	1	ವಳಗೆರಹಳ್ಳಿ
	4	ಬೈರಕೂರು ..	1	ಪಾಲೂರಹಳ್ಳಿ
ಮುಳಬಾಗಲು ..	5	ಯಿರಗಮುತ್ತೇನಹಳ್ಳಿ ..	1	ಕೊನಮಗುಂಟೆ
ಮಲ್ಲನಾಯಕನಹಳ್ಳಿ.	6	ತಿಪ್ಪದೊಡ್ಡಿ ..	1	ಮುಕ್ತಡಿಪೈಯ್ಯಪಲ್ಲಿ
ಯಲಚೂರು ..	7	ಅರಕೆರಿ ..	1	ಲಾಲಾಪುರ
	8	ಕೃಷ್ಣಾಪುರ ..	1	ಟಿಪ್ಪುಹಳ್ಳಿ
	9	ದೊಡ್ಡಗುರ್ಕಿ ..	1	ವೆಂಕಟೇಶಪುರ
			2	ಲಿಂಬಾಪುರ
			3	ಪೊಲಸಂದ್ರ
	10	ರಾಚಬಂಡಿ(ದುಗ್ಗಸಂದ್ರಹೊಬಳಿ) ..	1	ಜಾಗನ್ನಾಥಪುರ(ಯಲಚೂರುಹೋಬಳಿ)
	11	ಯಲಚೂರು ..	1	ಕುರಿನಾಯ್ಕನಹಳ್ಳಿ
	12	ಆಚ್ಚಂಪಲ್ಲಿ ..	1	ಮಲನಾಗನಹಳ್ಳಿ
			2	ಬನ್ನಂಪಲ್ಲಿ
	13	ಹರಳಕುಂಟಿ ..	1	ಗುರಪ್ಪರಡ್ಡಿಹಳ್ಳಿ
	14	ವಿಂಡಿಗನಗರ ..	1	ಕೊರವಪಲ್ಲಿಗಾನಿ
	15	ಯದರೂರು ..	1	ಕುರಬರಹಳ್ಳಿ
			2	ಅವಹನ್ನಿಗರ
			3	ಗೋಪಲಹಳ್ಳಿ
	16	ಕತ್ತಿವೀನನಹಳ್ಳಿ ..	1	ಟಿಪ್ಪಹಳ್ಳಿ
ಆವನಿ ..	17	ಕೇತಮಂಗಲ ..	1	ಮಂಚಿನಾಯ್ಕನಹಳ್ಳಿ
			2	ಮುಪರಹೊಸಹಳ್ಳಿ
	18	ಕುಪಿಬರಹೊಸಹಳ್ಳಿ ..	1	ನಾಗಿನಾಯ್ಕನಹಳ್ಳಿ
	19	ಅನಂತಾಪುರ ..	1	ಬಂಡಹಳ್ಳಿ
	20	ಮಜರೆಅತ್ತಿಕುಂಟೆ ..	1	ರಾಮಪಾನಕುಂಟೆ
	21	ಪೊಮ್ಮಸಂದ್ರ ..	1	ಮಲಸಂದ್ರ
	22	ಕೇಷಾಪುರ :	1	ಕುಪ್ಪಾಪುರ
ದುರ್ಗಸಂದ್ರ ..	23	ಮಟಿಕನಸಂದ್ರ .	1	ಕೆಂಸಲವಾರಹಳ್ಳಿ
	24	ಮಂಡಿಕಲ್ಲು ..	1	ಕುರಬರಹಳ್ಳಿ
	25	ಅಗತ ..	1	ಮಟ್ಟಪಲ್ಲಿ

ನಂ. 209.—ಇದರಡಿ ಕಂಡ ಗ್ರಾಮಗಳ ವರ್ಗಾವರ್ಗಿಯನ್ನು ಮಂಜೂರ್ಮಾಡೋಣಾಗಿನಿತ್ತಿವೆ.

ನಂಬರ್.	ಗ್ರಾಮದ ಹೆಸರು.	ಯಾವ ತಾಲ್ಲೂಕಿನಿಂದ.	ಯಾವ ತಾಲ್ಲೂಕಿಗೆ ವರ್ಗ.	ಷರಾ.
1	2	3	4	5
1	ಚಿಂಗಾರಪಲ್ಲಿ .	ಮುಳಬಾಗಲ್	ಬಂಗಾರಪೇಟೆ	
*2	ಮಟಿಕಸಂದ್ರ ..			*ಹಾಲಿ ವೀರಸಿಬಿಡೋಣಾವ ಕೆಂಸಲ
3	ರಾಚಗೊಂಡ್ಲಹಳ್ಳಿ ..			ವಾರಪಲ್ಲಿ ಯೊಂದಿಗೆ.

ನಂ. 207.—ಮೈಸೂರು ತಾಲ್ಲೂಕು ಪೈಕಿ ಕೆಲವು ಗ್ರಾಮಗಳನ್ನ ಅಜೂಬಾಜೂ ಗ್ರಾಮಗಳಿಗೆ ಕೀರಸೋಣಾಗುವಂತಾ ತಪೇಲ್ ಕಂಡ ಇದರಡಿ ಬರುವ ತಖ್ತೆಯನ್ನ ಪ್ರಕಟಪಡಿಸೋಣಾಗಿರುತ್ತದೆ.

ಮೂಗಣಿ.	ನಂ.	ಕಾಯಂ ಯಿಡಲ್ಪಟ್ಟ ಗ್ರಾಮದ ಹೆಸರು.	ಸಂಖ್ಯೆ.	3ನೇ ಹೆಡ್ಡಿನಲ್ಲಿ ನಮೂದಾದ ಗ್ರಾಮಗಳಿಗೆ ಕೀರಿಸಿಬಿಡೋಣಾದ ಗ್ರಾಮಗಳ ಹೆಸರು.	ಪರಾ.
1	2	3	4	5	6
ಮೈಸೂರು ..	1	ಕುರಬರಹಳ್ಳಿ ..	1	ಚಟ್ಟಹಳ್ಳಿ	
ಆನಂದೂರು ..	2	ಕಲ್ಲೂರನಾಗನಹಳ್ಳಿ ..	1	ಕೆಂಚನಹಳ್ಳಿ	
ಯಿಲವಾಲ ..	3	ಹಿರಿಯಾಲು ..	1	ಆಂಗೋಡಿಹಳ್ಳಿ	
	4	ಜೊಮ್ಮನಹಳ್ಳಿ ..	1	ಸೋರೆಕಾಯಿಪುರ	
ವರಕೋಡು ..	5	ಚಟ್ಟಹಳ್ಳಿ ..	1	ನಾರನಹಳ್ಳಿ	
ಲಿಂಗಾಂಬುಧಿ ..	6	ಲಿಂಗಾಂಬುಧಿ ..	1	ಮಾಳಗಾಳ	
	7	ಕಳಲವಾಡಿ ..	1	ರಾಯನಕೆರೆ	
			2	ಬನ್ನೂರು	
	8	ಹೆಬ್ಬಾಳು ..	1	ಬಡಜೊಮ್ಮನಹಳ್ಳಿ	
	9	ಮುಳ್ಳೂರು ..	1	ಗುಲಮಾಚನಹಳ್ಳಿ	
ಶಿಂಧವಳ್ಳಿ ..	10	ದೊಡ್ಡಕಂಬ್ಯ ..	1	ಸೋಮೇನಹಳ್ಳಿ	

ತಾರೀಖು 7ನೇ ಅಕ್ಟೋಬರ್ 1889.

ನಂ. 210.—ಇದರಡಿಕಂಡ ಗ್ರಾಮಗಳ ವರ್ಗವರ್ಗಿಯನ್ನ ಮಂಜೂರ್ಮಾಡೋಣಾಗಿರುತ್ತದೆ.

1. ಚನ್ನಾಪುರ
2. ಕಾನಭೋಗನಹಳ್ಳಿ

} ಶ್ರೀರಂಗಪಟ್ಣ ತಾಲ್ಲೂಕಿನಿಂದ ನಾಗಮಂಗಲ ತಾಲ್ಲೂಕಿಗೆ ವರ್ಗ.

1. ಚಿಕ ಸಮುದ್ರ
2. ಚಟ್ಟನಪುರ

} ನಾಗಮಂಗಲ ತಾಲ್ಲೂಕಿನಿಂದ ಅತ್ತಿಕುಪ್ಪೆ ತಾಲ್ಲೂಕಿಗೆ ವರ್ಗ.

ತಾರೀಖು 19ನೇ ಅಕ್ಟೋಬರ್ 1889.

ನಂ. 216.—ಸಕಲ ಜನಗಳಿಗೂ ತಿಳಿಯುವಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನೆಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೊಸ್ಕರ ಕ್ರಮಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮಗಳೂ ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳ್ಳಿಗ್ಗೆ 11 ಘಂಟೆಗೆ ಹರಾಜು ಶುರುವಾಗಿ ಉಳಿಕೆಯಾವದೂ ಇಲ್ಲದೆ ಗ್ರಾಮವು ಚಡದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಹಿಪ್ಪ್ಯೋಟ ಕಮ್ಮಿಷನರವರು ತಮ್ಮ ಯಬ್ತ್ಯಾರೀ ವೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಒಪಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ಪೈಕಿ ಕೀಕಡಾ 25 ರೂಪಾಯಿ ಡಿಪಾಜಿಟ್ ಇಡಪೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಯಿತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅನ್ವಲಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳೆ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ತಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇವೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮಬ್ತುಕೂಫ್ ಮಾಡಲ್ಪಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಬಾಯಿಮಾದ್ಕಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಸಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಸೀಲ್ದಾರ್ಲಿಗಲಿ ಅಂಮಾಜಾ ಬೀಜವರೀ ವಿಷಯದ ಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಪ್ರಾಜೆನಿಂದ ನುಕ್ಸಾನ್ ಪಟ್ಟಂಥ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲಿನಲ್ಲಿ ಆಗುವ ಆಜ್ಞೆಯ ಪ್ರಕಾರಮಿಗೆ ಸದರೀ ಕ್ರಯವು ವಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜು ಸರಕಾರಕ್ಕೆ ಕೊಟ್ಟುವೇ ಯಾಪತ್ಯಕ್ಕಾದ ಕ್ವಿಟರೆಂಟ್.	ಸಾಲಿಯಾನಾ ಸರಕಾರಕ್ಕೆ ಕೊಟ್ಟುವೇ ಯಾಪತ್ಯಕ್ಕಾದ ಕ್ವಿಟರೆಂಟ್.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
					ಎಕರೆ. ಗುಂ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಕೋಲಾರ.	ಚಿಕ್ಕಬಳ್ಳಾಪುರ	ನಂದಿಬೆಟ್ಟ	ತಿಮ್ಮನಾಯಕನಹಳ್ಳಿ ಗ್ರಾಮ	ನಾರಣಪಂಡಿತ ಜೋಡಿ ವಗೈರೆ	390 96	255 0 0	116 6 2	148 13 7 ಮತ್ತು ಬಡ್ಡಿ	ಸ್ ೧೮೮೯ನೇ ಇಸವಿ ನವಂಬರ್ ತಾರೀಖು 18ರಲ್ಲು ತಾಲ್ಲೂಕು ಕಚೇರಿಯಲ್ಲಿ ಆಮಲ್ದಾರ್ರ ರೂಬರೂ ಡಿಟೋ ಡಿಟೋ 20ರಲ್ಲು ಡಿಟೋ
			ತಿಮ್ಮನಾಯಕನಹಳ್ಳಿ ಗ್ರಾಮ	ಕೂಸಾಚಾರ್ರು ವಗೈರೇರು	118 77	84 0 0	49 1 4	136 7 8 ಮತ್ತು ಬಡ್ಡಿ	
			ಜಯಪಲ್ಲಿ ಜೋಡಿಗ್ರಾಮ	ಖಂ. ಕೂ. ಪ 55 10 12½ ಕಲ್ಯಾಣ ಕೃಷ್ಣಾಚಾರ್, ಭೀಮಾಚಾರ್, ನಾರಾಯಣರಾವ್ ವಗೈರೇರು		66 7 3	56 6 8	125 1 0 ಮತ್ತು ಬಡ್ಡಿ	ಡಿಟೋ ಡಿಟೋ
			ಗೊಲ್ಲಮಾರಹಳ್ಳಿ ಜೋಡಿಗ್ರಾಮ	ಸುಬ್ಬಾಶಾಸ್ತ್ರಿ ವಗೈರೇರು	9 5 0	148 3 1	152 12 0	644 5 6 ಮತ್ತು ಬಡ್ಡಿ	ಡಿಟೋ ಡಿಟೋ

ಪರಾ.—ಜೋಡೀದಾರರುಗಳಿಂದಲಾಗಲಿ, ಬಾಧ್ಯತೆಯ ಮೂಲಕ ಯಿವರುಗಳಿಗೆ ಹಿಂದೆ ಯಿದ್ದವರಿಂದಾಗಲಿ ಉಂಟುಮಾಡಲ್ಪಟ್ಟ ತಮಾಂ ಹಿಡುವಳಿಗಳಿಗೂ ದೇಣಿಗೆಗಳಿಗೂ ಮತ್ತು ಹಕ್ಕುಗಳಿಗೂ ಅಥವಾ ಮತ್ಯಾವ ಸಂಬಂಧಗಳಿಗೂ ಸದರೀ ಹರಾಜು ವಳಪಟ್ಟಿರುದಿಲ್ಲ.

ತಾರೀಖು 28ನೇ ಅಕ್ಟೋಬರ್ 1889.

ನಂ. 220.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನೆಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಕಾಯಂಗುತ್ತಿಗೆದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಖಾಯಂಗುತ್ತಾ ಗ್ರಾಮಗಳು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ಆ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಮುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಡದರಖಾಸ್ತುದಾರರಿಗೆ ಪರಾಜ್ ನಿಲ್ಲುವದು.

2. ಪರಂತು, ಬಂದು ಗ್ರಾಮವು ಪ್ರತ್ಯೇಕವಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯೂಟಿ ಕಮ್ಮಿಷನರವರು ತಮ್ಮ ಯಿಷ್ಟಾನ್ಸಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಪ್ರತ್ಯೇಕವಾಗಿ ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಕೇಷನಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವೆಲ್ ಕ್ರಯದಾರನ ಖರ್ಚಿನಲ್ಲಿ ಪ ನುಕ್ಸಾನಾಗಿ ಮರಳಿ ಹರಾಜು ಹಾಳಲ್ಪಡುವವೆ.

5. ಹರಾಜಿನಲ್ಲಿ ಕರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರಫ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂವಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು

ಮಾಡಲ್ಪಟ್ಟ ಬರವಣಿಗೆ ಮೂಲಕನಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಿಡ್ಡಿ ಯಾ ಇತರ ಖರ್ಚುಗಳು ಬೇಬೀಲ್ ಕಂಡಾಯದ ಬಾಕಿ ವೊಲಲಗನ್ನು ಪೂರಾ ಪಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜ್ ಮುಕೂಫ್ ಮಾಡಲ್ಪಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಪೂಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಅತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡಿಪ್ಯೂಟಿ ಕಮ್ಮಿಷನರವರಿಂದ ರುಜು ವೊಹರ್ ಮಾಡೋಣಾವ ಬಂದು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ, ಇರುವ ಗಲ್ಲತಿಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪಂತು, ಸದರೀ ಹರಾಜಿನಿಂದ ನುಕ್ಸಾನಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಅಪ್ಪೈರ್ ಹುಕುಮಿಗೆ ಸದರೀ ಕ್ರಯವು ಬಳಪಟ್ಟು ಇರುತ್ತೆ.

ಜಿಲ್ಲೆ.	ತಾಲ್ಲೂಕು.	ಹೋಬಳಿ.	ಗ್ರಾಮ.	ಕಾಯಂಗುತ್ತಾದಾರರ ಹೆಸರು.	ಅಂದಾಜಾ ಬೀಜವರಿ.	ಅಂದಾಜಾ ಹುಟ್ಟುವಳಿ ಯಾ ಜೇರಿಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟೆರೆಂಟ್.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
ಕೋಲಾರ.	ಬಿಡಿಸಿಟ್ಟು ಬೆಂಗಳೂರ.	ಬೋಪ್ಪನಹಳ್ಳಿ.	ಬಿಡಿಸಿಟ್ಟು ಕಾಯಂಗುತ್ತಾದಿ ಗ್ರಾಮು.	ನಂಜುಂಡ ರಾಸ್ತ್ರಿ ವಗೈರೇರು	ಎಕರೆ. ಸೆಂ. 351—33	ರೂ. ಆ. ಪೈ. 246 4 0 ಲೋಕಲ್ ಸಸ	ರೂ. ಆ. ಪೈ. ಕಾಯಂಗುತ್ತಾ ಬಾಬತು 83 0 0 5 3 0 88 3 0	ರೂ. ಆ. ಪೈ. 226 13 2 ವ ಬಡ್ಡಿ ಸಹ	ಸ್ಯ 1889ನೇ ಇಸವಿ ಡಿಸೆಂಬರ್ ತಾ 2ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್ದಾರ್ರು ರೂಬರೂ.

ಷರಾ.—ಕಾಯಂಗುತ್ತಾದಾರರುಗಳಿಂದಲಾಗಲಿ, ಬಾಧ್ಯತೆಯ ಮೂಲಕ ಯಿವರುಗಳಿಗೆ ಹಿಂದೆ ಯಿದ್ದವರಿಂದಲಾಗಲಿ, ಉಂಟುಮಾಡಲ್ಪಟ್ಟ ತಮಾಂ ಹಿಡುವಳಿಗಳಿಗೂ, ದೇಣಿಗೆಗೂ ಮತ್ತು ಹಕ್ಕುಗಳಿಗೂ ಅಥವಾ ಮತ್ಯಾವ ಸಂಬಂಧಗಳಿಗೂ ಸದರೀ ಹರಾಜು ಬಳಪಟ್ಟಿರುವದಿಲ್ಲ.

ತಾರೀಖು 9ನೇ ಅಕ್ಟೋಬರ್ 1889.

ನಂ. 206.—ಸ್ಯ 1878ನೇ ಇಸವಿಯ ಮೈಸೂರ ಫಾರೆಸ್ಟ್ ರೂಲ್ಸ್‌ಗಳ 14 ಮ 49ನೇ ಕಲಮುಗಳನುಸರಿಸಿ ಇದರಿಂದ ಬರುವ ಉಸನಿಬಂಧನೆಗಳು ಮಂಜೂರ್ಮಾಡೋಣಾಗಿ, ಸರ್ವರಿಗೂ ತಿಳಿಯತಕ್ಕ ಬಗ್ಗೆ ಫಾಯಿಷ್ ಮಾಡಲ್ಪಟ್ಟಿರುತ್ತೆ.

14ನೇ ಸೆಕ್ಷರ್ಷ ಅನುಸರಿಸಿ.

1. ದನಗಳನ್ನು ಮೇಯಿಸಲಿಕ್ಕೆ ಅಪ್ಪಣೆಯಿಲ್ಲದ ಸ್ಟೇಟ್ ಯಾ ಉಳಿಸಿಕೊಳ್ಳಲ್ಪಟ್ಟ ಫಾರೆಸ್ಟ್‌ಗಳಲ್ಲಾಗಲಿ, ವ್ಯಾಟೇಷನಿನಲ್ಲಾಗಲಿ ಯಾ ಯಾವದಾದರೂ ಇತರ ಬಂದಾದ ಜಂಗಲಿಯಲ್ಲಾಗಲಿ ತೊಂಡ್ ಜಾನವರ ತಿಕ್ಕಿದಲ್ಲಿ ಅವುಗಳ ಮೇಲೆ ಇದರಿಂದ ನಮೂದಾಗುವ ಮೇರಿಗೆ ಜುರ್ಮಾನೆ ದಸೂಲಾಗತಕ್ಕದ್ದು:—

	ರೂ.	ಆ.	ಪೈ.
ಆನೆ 1ಕ್ಕೆ	5	0	0
ಒಂಟೆ 1ಕ್ಕೆ	1	0	0
ಕೋಣ ಅಥವಾ ಯಮ್ಮೆ 1ಕ್ಕೆ	0	8	0
ಗಂಡು ಕುದುರೆ, ಹೆಣ್ಣು ಕುದುರೆ, ಪುಳೂಕುದುರೆ, ಟಾಕಣ, ತಟ್ಟು, ಮರಿ ಕುದುರೆ, ಹೇಸರಕತ್ತೆ, ಯತ್ತಿನಹೋರಿ, ಯತ್ತು, ಹಸುವು, ಕಡಸು, ಕತ್ತೆ, ಮೇಕೆ, ಯಾ ಮೇಕೇಮರಿ, ಕುರಿಪಟ್ಟೆ, ಹೆಣ್ಣು ಕುರಿ, ಕುರಿ, ಕುರಿಮರಿ, ಕರು ಯಾ ಹಂದಿ ಪ್ರತಿ 1ಕ್ಕೆ	0	4	0

2. ಜಾನವರು ತೊಂಡವಾಡಿಯಲ್ಲಿ ಯಿರುವಾಗ ತಗಲುವ ಖರ್ಚಿಗಾಗಿ ವೊಕರರ್ಮಾಡಲ್ಪಟ್ಟಿರುವ ನಿರಖಿನ ತಪಶೀಲು.

			ರೂ.	ಆ.	ಪೈ.
ಆನೆ 1ಕ್ಕೆ ರೋಜೀನಾ	...	..	1	0	0
ಒಂಟೆ 1ಕ್ಕೆ ಡಿಟೋ	..	..	0	8	0
ಯನ್ಮ್ಯೆ ಯಾ ಕೋಣ 1ಕ್ಕೆ ಡಿಟೋ	..	..	0	4	0
ಇತರ ಜಾತಿ ಕಾಲ್ನಡೆ 1ಕ್ಕೆ ಡಿಟೋ	..	..	0	3	0

3. ದೊಡ್ಡಿಗೆ ಸಾಗಿಸಲ್ಪಟ್ಟ ಜಾನವರುಗಳ ಮಾಲೀಕನಾಗಲಿ ಯಾ ಅವನ ಮುತಾಲೀಕನಾಗಲಿ, ಜಾನವರುಗಳು ದೊಡ್ಡಿಗೆ ಸಾಗಿಸಲ್ಪಟ್ಟ ತಾರೀಖ್ ಲಾಗಾಯತು 7 ದಿವಸಗಳೊಳಗಾಗಿ ಮೇಲ್ಕಂಡ ಮೇರಿಗೆ ಜುರ್ಮಾನೆ ವ ಲಾಗವಡು ಸಹಿತ ದೊಡ್ಡಿಯ ಕೀಪರಿಗೆ ವಾವತಿಮಾಡಿ ತನ್ನ ಜಾನವರುಗಳನ್ನ ವಾಪಸು ತೆಗತುಕೊಳ್ಳತಕ್ಕದ್ದು; ಹಾಂಗೆ ಮಾಡಲಿಕ್ಕೆ ತಪ್ಪಿದಲ್ಲಿ, ಆ ಜಾನವರುಗಳು ಯಾವ ರೇಂಜರಿನ ಸುಪರ್ದಿನಲ್ಲಿ ಯಿರುತ್ತೋ ಆ ರೇಂಜರು, ಹರಾಜು ಮಾಡಿಸುವದಕ್ಕೆ ಯೇಳು ದಿವಸಗಳಿಗೆ ಮುಂಚಿತವಾಗಿಯೇ ಹರಾಜಿನ ಸಂಗತಿ ಅಜೂಬಾಜೂ ಗ್ರಾಮಗಳೊಳಗೆ ಬಹಿರಂಗವಾಗಿ ತಿಳಿಯಪಡಿಸಲಿಕ್ಕೂ ಆ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರಿಗೆ ರಿಪೋರ್ಟು ಮಾಡಲಿಕ್ಕೂ ಬದ್ಧನಾಗಿದ್ದು, ಅಂತಾ ಜಾನವರ್‌ಗಳನ್ನ ಪಬ್ಲಿಕ್ ಹರಾಜ್ ಮೂಲಕ ವಿಕ್ರಯಿಸತಕ್ಕದ್ದು. ಬಂದು ವೇಳೆ, ಅಂತಾ ಜಾನವರ್‌ಗಳನ್ನ ಪಾಗೆ ಹರಾಜಿನ ಮೂಲಕ ವಿಕ್ರಯಿಸುವಣದರಿಂದ ಸರಿಯಾದ ಬೀರಿ ಹೊರದಲಾರದೆಂದು ಹಾಜಾಗುವದಕ್ಕೆ ಮುಂಚೆ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ ತಿಳುವಳಿಕೆಗೆ ಬಂದಲ್ಲಿ ಆಗ ಆ ಆಫಿಸರು ತನಿಗೆ ಯುಕ್ತ ತೋರುವ ರೀತ್ಯ ಅವುಗಳನ್ನ ವಿಲೇವಾರಿಮಾಡುವಂತೆ ಹುಕುಂ ಮಾಡಬಹುದು.

4. ಬಂದು ವೇಳೆ ಮಾಲೀಕನಾಗಲಿ, ಅವನ ಮುತಾಲೀಕನಾಗಲಿ ಹಾಜರಾಗಿ ಜಾನವರ್‌ಗಳನ್ನ ದೊಡ್ಡಿಗೆ ಕೀರಿಸಿರುವದು ಅಕ್ರಮವೆಂತಲೂ ಆ ಬಗ್ಯಾಗಿ ಮಾಲೀಕನು ಫಿರ್ಯಾದ ಮಾಡುತ್ತೇನೆಂಬ ಕಾರಣದ ಮೇಲೆ, ಮೇಲೆ ಹೇಳೋಣಾದ ಮೇರಿಗೆ ಜುರ್ಮಾನೆ ವ ಲಾಗವಡು ಮೊಬಲಗನ್ನ ಕೊಡಲಿಕ್ಕೆ ನಿರಾಕರಿಸಿದಲ್ಲಿ ಆಗ, ಜುರ್ಮಾನೆ ವ ಜಾನವರಿಗಾಗಿ ತಗಲಿದ ಲಾಗವಡ ಮೊಬಲಗನ್ನ ಕೀವಣತಿ ಯಿಟ್ಟು, ಜಾನವರ್‌ಗಳನ್ನ ವಾಪಸ್ ಪಡೆಯತಕ್ಕದ್ದು.

5. ಮಾಲೀಕನಾಗಲಿ, ಅವನ ಮುತಾಲೀಕನಾಗಲಿ, ಹಾಜರಾಗಿ ಮೇಲೆ ಹೇಳೋಣಾದ ಮೇರಿಗೆ ಜುರ್ಮಾನೆ ವ ಲಾಗವಡು ಮೊಬಲಗನ್ನ ವಾವತಿ ಮಾಡಲಿಕ್ಕಾಗಲಿ ಅಥವಾ ಡಿಪಾಜಿಟ್ ಯಾನೇ ಕೀವಣತಿ ಯಿಡಲಿಕ್ಕಾಗಲಿ ನಿರಾಕರಿದಾಗ್ಯೂ ಅಥವಾ ತಪ್ಪಿಹೋದಾಗ್ಯೂ, ಸದರೀ ರೇಂಜರು ಅಂತಾ ಜಾನವರ್‌ಗಳು ಅಥವಾ ಆ ಪೈಕಿ ಅವಶ್ಯಕ ತೋರುವಷ್ಟು ಕೆಲ್ನಡೆಗಳನ್ನ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸತಕ್ಕದ್ದು.

ಸದರೀ ಹರಾಜಿನಲ್ಲಿ ಹುಟ್ಟುವಳಿ. ಆಗುವ ಮೊಬಲಗಿನಲ್ಲಿ ಮೇಲ್ಕಂಡ ಮೇರಿಗೆ ಜುರ್ಮಾನೆ ಮೊಬಲಗು ಜಾನವರ್‌ಗಳಿಗೆ ರಾತೀಬ್ ಹಾಕಿದ ಲಾಗವಡೂ ಮತ್ತು ಹರಾಜಿಗಾಗಿ ಏನಾದರೂ ಖರ್ಚಾಗಿದ್ದಲ್ಲಿ ಆ ಮೊಬಲಗೂ ಸಹ ವಜಾ ಆಗತಕ್ಕದ್ದು.

ಬಾಕಿ ಪ್ರೋದ ಜಾನವರುಗಳು ಮತ್ತು ಹರಾಜ್ ಹುಟ್ಟುವಳಿ ಪೈಕಿ ಬಾಕಿ ನಿಂತ ಮೊಬಲಗು (ಯೇನಾದರೂ ಯಿದ್ದಲ್ಲಿ) ಮಾಲೀಕನಿಗಾಗಲಿ, ಅವನ ಮುತಾಲೀಕನಿಗಾಗಲಿ ಈ ಕೆಳಗೆ ಬರುವ ತಪಶೀಲ್‌ಪಟ್ಟಿಯೊಡನೆ ವಾವತಿ ಯಾಗತಕ್ಕದ್ದು:—

ತಪಶೀಲ್ ಏನಂದರೆ.

(*a*) ಹಿಡಿಯಲ್ಪಟ್ಟ ಜಾನವರುಗಳ ಸಂಖೆ
(*b*) ದೊಡ್ಡಿಯಲ್ಲಿ ಜಾನವರುಗಳು ಯಿದ್ದ ದಿವಸಗಳು
(*c*) ಜುರ್ಮಾನೆ ಮೊಬಲಗು ವ ತಗಲಿದ ಲಾಗವಡ್ ಮೊಬಲಗು
(*d*) ಹರಾಜ್ ಹಾಕಲ್ಪಟ್ಟ ಜಾನವರ್‌ಗಳ ಸಂಖೆ
(*e*) ಹರಾಜಿನಲ್ಲಿ ಹುಟ್ಟುವಳಿ ಆದ ಮೊಬಲಗು
(*f*) ಹರಾಜ್ ಮೊಬಲಗು ಯಾವ ರೀತಿ ವಿಲೇವಾರಿ ಆಯಿತೋ ಆ ತಪಶೀಲು

ಜಾನವರ್‌ಗಳ ಮಾಲೀಕ ಯಾ ಅವನ ಮುತಾಲೀಕನು ತನ್ನ ವಕ್ಕಿಕ್ಕೆ ತೆಗದುಕೊಂಡ ಜಾನವರಿಗಾಗಿ ವೊಂದು ರೀದಿಯನ್ನ ಕೂಡಲೇಕಾದ್ದಲ್ಲದೆ, ಮೇಲೆ ನಮೂದಾದ ಲೆಕ್ಕದ ಮೇರಿಗೆ ಹರಾಜ್ ಮೊಬಲಗ್ ಪೈಕಿ ಉಳಿದ ಬಾಕಿ ಮೊಬಲಗ್ ಏನಾದರೂ ವಾವತಿ ತೆಗದು ಕೊಂಡಲ್ಲಿ ಅದಕ್ಕೂ ಸಹ ರೀದಿಯನ್ನ ಕೊಡತಕ್ಕದ್ದು.

6. ಅಕ್ರಮವಾಗಿ ಹಿಡಿಯಲ್ಪಟ್ಟಿಂತಾದ್ದಕ್ಕಾಗಿ ಯಲ್ಲ ಫಿರ್ಯಾದುಗಳನ್ನೂ ಹಾಗೆ ಹಿಡಿಯಲ್ಪಟ್ಟ ತಾರೀಖ್ ಲಾಗಾಯತು ವೊಂದು ತಿಂಗಳವಳಗಾಗಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರಲ್ಲಿ ದಾಖಲ್ಮಾಡತಕ್ಕದ್ದು. ಅವರು ಫಿರ್ಯಾದುಗಳನ್ನ ವಿಚಾರಣೆಯಿಂದ ಫೈಸಲ್ ಮಾಡತಕ್ಕದ್ದು.

7. ಯಾವ ಫಾರೆಸ್ಟ್ ದೊಡ್ಡಿಗಳಿಗಾಗಿ ಆಲಾಹಿದಾ ಜನಗಳು ನೇಮುಕವಾಗಿ ಯಿರುವವಿಲ್ಲವೋ ಆ ಸಂದರ್ಭದಲ್ಲಿ ಫಾರೆಸ್ಟರುಗಳು ಯಾ ಫಾರೆಸ್ಟು ಇಲಾಖೆಯ ಇತರ ನೌಕರರು ಅಂತಾ ಫಾರೆಸ್ಟು ದೊಡ್ಡಿಗಳ ಯಕ್ಸ ಆಫಿಸಿಯೋ ಕೀಪರುಗಳಾಗಿರತಕ್ಕದ್ದು.

8. ಈ ನಿಬಂಧನೆಗಳನುಸರಿಸಿ ವೊಕರರ್ಮಾಡಲ್ಪಡುವ ಪ್ರತಿ ದೊಡ್ಡಿಯ ಕೀಪರೂ ವೊಂದು ರಜಿಸ್ಟರನ್ನ ಯಿಡಬೇಕಾದ್ದಲ್ಲದೆ, ದನಗಳು ದೊಡ್ಡಿಗೆ ತರಲ್ಪಟ್ಟಾಗ ಯಾ ಸಾಗಿಸಲ್ಪಟ್ಟಾಗ, ಆ ರಜಿಸ್ಟರನಲ್ಲಿ ಯಿರಬೇಕಾದ ತಪಶೀಲು ಯೇನಂದರೆ:—

(a) ದನ ವಗೈರೆಗಳ ಸಂಖ್ಯೆ ಮತ್ತು ಅವುಗಳ ವಿವರಣೆ
(b) ದೊಡ್ಡಿಗೆ ದನಗಳು ತರಲ್ಪಟ್ಟ ತಾರೀಖು ವ ಘಂಟೆ.
(c) ದನಗಳನ್ನು ಹಿಡಿದವನ ಹೆಸರು ವಾಸಸ್ಥಳ ಕಸಬು ಮತ್ತು
(d) ಗೊತ್ತಾದಲ್ಲಿ, ಮಾಲೀಕನ ಹೆಸರು ವ ವಾಸಸ್ಥಳ

9. ಯಾವ ದೊಡ್ಡೀ ಕೀಪರೇಆಗಲಿ ಈ ಉಪನಿಬಂಧನೆಗಳಿಗೆ ವಿರುದ್ಧವಾಗಿ ದನಗಳನ್ನು ಬಿಟ್ಟು ಬಿಡುತ್ತಾನೋ ಖರೀದಿಗೆ ತೆಗೆದುಕೊಳ್ಳುತ್ತಾನೋ ಯಾ ಸುಫರ್ದು ವಹಿಸುತ್ತಾನೋ ಅಥವಾ ದೊಡ್ಡಿಯಲ್ಲಿ ಕೀರಿಸಲ್ಪಟ್ಟಿರುವ ದನಗಳಿಗೆ ಪೂರಾ ದಾಣೇಚಾರೆ ಕೊಡುವದಕ್ಕೆ ತಪ್ಪುತ್ತಾನೋ ಯಾ ಈ ನಿಬಂಧನೆಗಳಲ್ಲಿ ವಿಧಿಸೋಣವಾಗಿರುವ ಕೆಲಸಗಳನ್ನು ಮಾಡಲಿಕ್ಕೆ ತಪ್ಪುತ್ತಾನೋ ಅಂತಾ ಕೀಪರು 1878ನೇ ಇಸವಿಯ ಮೈಸೂರು ಫಾರೆಸ್ಟ್ ರೂಲ್ಸಿನ 46ನೇ ಕಲಮಿನಲ್ಲಿ ಕಂಡ ತಕ್ಸೀರನ್ನು ನಡೆದವನಂತೆ ಯಜಿಸಲ್ಪಡತಕ್ಕದ್ದು.

49ನೇ ನಿರ್ಣಯ ಅನುಸರಿಸಿ.

I. ನಾಟು ಆಗಲಿ ಸಂದಲ್ ಆಗಲಿ ಯಾ ಇತರ ಜಂಗ್ಲೀ ಉತ್ಪತ್ತಿಯಾಗಲಿ ಅಕ್ರಮವಾಗಿ ಫಲಾನೆಯವನ ಸ್ವಾಧೀನದಲ್ಲಿ ಯಿರುತ್ತೆಂದು ಯಾವ ವ್ಯಕ್ತಿಯ ಬಾತಮಿಯಾ ಮೂಲಕ ನಿಶ್ಚಯವಾಗುತ್ತದೆಯೋ ಅಂತಾ ಬಾತಮೀದಾರನಿಗೆ, ಅಂತಾ ನಾಟು, ಸಂದಲ್ ಯಾ ಇತರ ಜಂಗ್ಲೀ ಉತ್ಪತ್ತಿಯು ಸರ್ಕಾರಕ್ಕಾಗಿ ಹರಾಜುದಾಗ ಸದರೀ ನಾಟು, ಸಂದಲ್, ಯಾ ಜಂಗ್ಲೀ ಉತ್ಪತ್ತಿಯು ಸರ್ಕಾರಕ್ಕೆ ಕೀರತಕ್ಕದ್ದೆಂದು ಹುಕುಂ ಮಾಡುವ ಮಾಜಿಸ್ಟ್ರೇಟರಿಗೆ ಯುಕ್ತ ತೋರುವ ಮೊತ್ತಿಗೆ ಗಂಧದ ಹರಾಜಿನ ಖರ್ಚ ಹೆಚ್ಚುವರಿಯು ಮೊಬಲಗ್ ಪೈಕಿ ನಾಲ್ಕರಲ್ಲಿ ಒಂದು ಹಿಸ್ಸೆಯನ್ನೂ, ನಾಟು ಯಾ ಜಂಗ್ಲೀ ಉತ್ಪತ್ತಿಯ ಹರಾಜಿನ ಖರ್ಚು ಹೆಚ್ಚುವರಿಯ ಮೊಬಲಗ್ ಪೈಕಿ ಮೂರರಲ್ಲಿ ಒಂದು ಹಿಸ್ಸೆಯನ್ನೂ ಇನಾಮಾಗಿ ಕೊಡಬಹುದು. ಫಾರೆಸ್ಟ್ ಇಲಾಖೆಯ ಸುಫರ್ದು ಮಾಡಲ್ಪಟ್ಟು ಕೋಠಿ ಯಾ ಡಿಪೋವಿನ ಲೆಕ್ಕಕ್ಕೆ ದಾಖಲಾಗುವಂತಾ ಗಂಧ ಯಾ ನಾಟುಗಳ ವಿಷಯದಲ್ಲಿ ಅಂತಾ ಗಂಧ ಯಾ ನಾಟುಕ್ಕೆ ಫಾರೆಸ್ಟ್ ಇಲಾಖೆಯವರು ಅಂದಾಜು ತರಾವ್ ಮಾಡುವ ಖರೀದಿಮೇಲೆ ಲೆಕ್ಕ ಚಾರಮಾಡಿ ಇನಾಂ ಕೊಡಲ್ಪಡತಕ್ಕದ್ದು. ಮಾಜಿಸ್ಟ್ರೇಟರು, ಅಂತಾ ನಾಟು, ಸಂದಲ್ ಯಾ ಜಂಗ್ಲೀ ಉತ್ಪತ್ತಿಯನ್ನ ಸರ್ಕಾರ್ ದಾಖಲೆಮಾಡಿಕೊಳ್ಳತಕ್ಕದ್ದೆಂದು ಹುಕುಂ ಕೊಡುವಾಗಲೇನೇ ಇನಾಮು ಸಲ್ಲತಕ್ಕದ್ದು ಅಥವಾ ಯಿಲ್ಲ ಯಂಬ ಅಂಶ ಬರೆಯತಕ್ಕದ್ದು.

II. ಯಾವದಾದರೊಂದು ವಿಶೇಷ ಸಂಗತಿಯಲ್ಲಿ ಅಂದರೆ ಭಾರೀ ಬೆಲೆಯುಳ್ಳ ದಾಗೀನಾದೊರಿಯದೇ ತಕ್ಸೀರ್ ರುಜುವಾತಾಗಿದ್ದು, ಪರಂತು, ಅಂತಾ ದಾಗೀನಾ ಪತ್ತೆಯಾಗಿ ಹಾಜರಾಗಿದ್ದರೆ ಅದು ಫಾರೆಸ್ಟ್ ರೂಲ್ಸ್ ಅನುಸರಿಸಿ ಸರ್ಕಾರ್ ದಾಖಲಾಗುತ್ತಿದ್ದ ಪಕ್ಷದಲ್ಲಿ ಮಾಜಿಸ್ಟ್ರೇಟರಿಗೆ ಯುಕ್ತತೋರುವ ಮೇರೆಗೆ ಜುರ್ಮಾನೇ ಮೊಬಲಗ್ ಪೈಕಿ ಅರ್ಧಕ್ಕಿಂತಲೂ ಜಾಸ್ತಿಯಾಗದಂತೆ ಇನಾಂ ಕೊಡಲ್ಪಡಬಹುದು.

III. ನ್ಯಾಯಜಪಡಿ ಯಾನಿಕೀಳ್ಪಟ್ಟ ಗವರ್ನಮೆಂಟ್ ಉದ್ಯೋಗಸ್ತರು ವ ಸರ್ಕಾರ್ ನವುಕರಿಯಲ್ಲಿಲ್ಲದ ಇತರ ಜನರು ಇವರುಗಳ ಮೂಲಕವಾಗಿ ತಕ್ಸೀರ್‌ದಾರ್‌ರುಗಳು ಶಿಕ್ಷೆಗೆ ತರಲ್ಪಟ್ಟು ಸರ್ಕಾರ್ ದಾಖಲುಗಳಿಕ್ಕೆ ಗುರಿಯಾದ ದಾಗೀನಾ ಪತ್ತೆಯಾದರೆ ಅಂತಾ ಜನಗಳು ಈ ರೂಲ್ಸ್ ಅನುಸರಿಸಿ ಇನಾಂ ಹೊಂದಲು ಅರ್ಹರಾಗಿರುತ್ತಾರೆ, ಪರಂತು ಸದರೀ ಉದ್ಯೋಗಸ್ಥರು ಜಂಗ್ಲೀ, ಯಾ ಫಾರೆಸ್ಟ್ ಯಾ ಡಿಪೋ ಅಥವಾ ಸ್ಟೋರ್ ಚಾರ್ಜ್ ವಹಿಸಿಕೊಂಡು ಅವುಗಳನ್ನ ಕಾಪಾಡಲಿಕ್ಕೆ ಜವಾಬ್ದಾರ್ರಾಗಿರುತ್ತಾರಷ್ಟೆ ಅಂತಾ ಸ್ಥಳದಲ್ಲಿ ನಜೀದ ತಪ್ಪಿತವಾಗಿರಕೂಡದು.

IV. ಈ ನಿಬಂಧನೆಗಳನುಸರಿಸಿ ಒಬ್ಬನಿಗಿಂತಲೂ ಹೆಚ್ಚಾದ ಜನಗಳು ಇನಾಂ ಪಡೆಯಲಿಕ್ಕೆ ಅರ್ಹರಾಗಿದ್ದಾಗ ಇನಾಮು ಯಾವ ದಾಮಾಷಾಯಿ ಮೇರೆಗೆ ಅವರುಗಳಿಗೆ ಹಂಚಿಕೆಯಾಗಬೇಕೋ ಅದನ್ನು ಮಾಜಿಸ್ಟ್ರೇಟರು ನಿರ್ಮಾನ ಮಾಡತಕ್ಕದ್ದು.

V. ಈ ನಿಬಂಧನೆಗಳನುಸರಿಸಿ ಕೊಡಲ್ಪಡುವ ಇನಾಮುಗಳು ಅಪ್ಪೀಲ್ ವಾಯಿದೆ ಕಳೆದನಂತರ, ಯಾ ಅಪ್ಪೀಲು ತಿರಸ್ಕರಿಸಲ್ಪಟ್ಟ ತರುವಾಯ ನಿಶ್ಚಿತಯಾಗತಕ್ಕದ್ದು.

ತಾರೀಖು 26ನೇ ಅಕ್ಟೋಬರ್ 1889.

ಕ್ಯಾಂಪ್ ನಂ. 693.—ಬೆಂಗಳೂರು ಡಿಸ್ಟ್ರಿಕ್ಟ್ ಆಫೀಸಿಗೆ ಸೂಪರ್‌ನ್ಯೂಮರೆರಿಯಾಗಿ ಕೀರಿಸಲ್ಪಟ್ಟಿದ್ದ ಯು. ಶ್ರೀನಿವಾಸರಾವ್ ಯವರು, 1889ನೇ ಇಸವಿ ಜನವರಿ 9ರ ಲಾಗಾಯತು ಸೆಪ್ಟಂಬರ್ 4ರ ವರಿಗೆ ನೆಲವಂಗಲದ ತಾಲ್ಲೂಕು ಅಮಲ್‌ದಾರೀ ಕೆಲಸವನ್ನ ಆಕ್ಟಿಂಗ್ ತರ್ಕ್ ನೋಡಿರುತ್ತಾರೆ.

ತಾರೀಖು 29ನೇ ಅಕ್ಟೋಬರ್ 1889.

ತಪ್ಪು ತಿದ್ದುವಿಕೆ.

ನಂ. 219.—ಸ್ ೧೮೮೯ನೇ ಇಸವಿ ಅಕ್ಟೋಬರ್ 9ನೇ ಮಂಗಳವಾರ 206ನೇ ನಂಬರ್ ಇಸ್ತಿಹಾರಿನ 6ನೇ ಕಲಮಿನಲ್ಲಿ "ಒಂದು ತಿಂಗಳ" ಯಂಬ ಮಾತುಗಳಿಗೆ ಬದಲಾಗಿ "ಪದಿನೈದು ದಿವಸಗಳ" ಯೆಂದು ಕೀರಿಸತಕ್ಕದ್ದು.

ತಾರೀಖು 29ನೇ ಅಕ್ಟೋಬರ್ 1889.

ನಂ. 221.—ಚಿತ್ರದುರ್ಗ ಡಿಸ್ಟ್ರಿಕ್ಟಿನ ಅಸಿಸ್ಟೆಂಟ್ ಸರ್ಜನ್ ಜಿ. ಯಲ್. ಲಕ್ಷ್ಮಣಸ್ವಾಮಿಯವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 15 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಸದರೀ ಯವರಿಗೆ, 1889ನೇ ಇಸವಿ ಫಿಬ್ರವರಿ 5ನೇ ಮತ್ತು ಂ 7140–71—200ನೇ ನಂಬರ್ ಪ್ರೊಸೀಡಿಂಗ್ಸಿನಲ್ಲಿ ಪ್ರಕಟಿಸಿರೋಣಾದ ರೂಲ್ಸಿನ 1ನೇ ಕಲಮಿನ ನಿಬಂಧನೆಗಳನ್ನನುಸರಿಸಿ, 1889ನೇ ಇಸವಿ ಸಪ್ಟಂಬರ್ 3ನೆ. ಮತ್ತು ಂ 155ನೇ ನಂಬರ್ ಇಸ್ತಿಹಾರಿನಿಂದ ಕೊಡಲ್ಪಟ್ಟಿದ್ದ ಪ್ರಿವಿಲೀಜ್ ರಜಾವನ್ನ ಕ್ಯಾಜ್ಯುಯಲ್ ರಜಾವಾಗಿ ಇದರಿಂದ ಬದಲಾಯಿಸೋಣಾಗಿರುತ್ತೆ.

ನಂ. 222.—ಪಾನಗಡ ವಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಕುವಾತಸಾಮಿ ನಾದುಕರಿಗೆ ಮೆಡಿಕಲ್ ಸರಟಿಫಿಕೇಟ್ ಮೇಲೆ ಕೊಡಲ್ಪಟ್ಟಿದ್ದ ಯರಹು ತಿಂಗಳ ರಜಾಕ್ಕೆ ಜಾಸ್ತಿಯಾಗಿ ಯಿನ್ನೂ 15 ದಿವಸಗಳ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 30ನೇ ಅಕ್ಟೋಬರ್ 1889.

ನಂ. 223.—(ರಜಾದಮೇಲೆ ಇರುವ ಮಂಜೆರಾಬಾದ್ ಅಮಲ್ದಾರ್) ಸಿ. ಡಿ. ರಾಮಸ್ವಾಮಯ್ಯನವರು ಹಂಗಾಮಿ ತರೀಕ ಮೈಸೂರು ಷಹರಿನ ಅಮಲ್ದಾರ್ ವ 2ನೇ ಕ್ಲಾಸ್ ಮಾಜಿಸ್ಟ್ರೇಟರಾಗಿಯೂ, ಮತ್ತು 1888ನೇ ಇಸವಿ IIIನೇ ಮ್ಯುನಿಸಿಪಲ್ ರೆಗ್ಯುಲೇಷನಿಗನುಸಾರವಾಗಿ ಮ್ಯುನಿಸಿಪಲ್ ತೆರಿಗೆಗಳ ಕಲೆಕ್ಟರಾಗಿಯೂ ಪೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 224.—ಮೈಸೂರ ಷಹರಿನ ಅಮಲ್ದಾರ್ ವ 2ನೇ ಕ್ಲಾಸ್ ಮಾಜಿಸ್ಟ್ರೇಟ್ ಸಿ. ಡಿ. ರಾಮುಸ್ವಾಮಯ್ಯನವರು, ಮೈಸೂರ ಷಹರಿನ ಮ್ಯುನಿಸಿಪಲ್ ಸರಹದ್ದಿನೊಳಗೆ 2ನೇ ಕ್ಲಾಸ್ ಮಾಜಿಸ್ಟ್ರೇಟರ ಯಿಲ್ಲ ಅಧಿಕಾರಗಳನ್ನೂ ವ ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ IVನೇ ಷೆಡ್ಯೂಲಿನಲ್ಲಿ ಕಂಡಂತೆ 2ನೇ ಕ್ಲಾಸ್ ಮಾಜಿಸ್ಟ್ರೇಟರು ಚಲಾಯಿಸಬಹುದಾದಂಥಾ ಜಾಸ್ತೀ ಅಧಿಕಾರಗಳನ್ನೂ ಸಹ ನಡಿಸಲಿಕ್ಕೆ ಅಧಿಕಾರ ಹೊಂದಿರುತ್ತಾರೆ.

ನಂ. 225.—ಇದರಡಿ ಬರುವ ಯಿಂಡ್ಯಗವರ್ನಮೆಂಟ್ ಫಾರೆ ಇಲಾಬೆಯ 1889ನೇ ಇಸವಿ ಅಕ್ಟೋಬರ್ 2ನೇ ಮತ್ತು ಂ 3873ನೇ ನಂಬರುಳ್ಳ ಇಸ್ತಿಹಾರ್‌ನಾಮೆಯನ್ನ ಪುನಃ ಪ್ರಕಟಿಸೋಣಾಗಿರುತ್ತದೆ.

" (1879ನೇ ಇಸವಿಯ ಫಾರೆ ಜೂರಿಸ್ ಡಿಕ್ಷನ್ ವ ಯಾಕ್ಸ್‌ಟ್ರಾಡೀಷನ್ ಆಕ್ಟ್‌ಂಬ) 1879ನೇ ಇಸವಿಯ XXIನೇ ಆಕ್ಟಿನ
" 6ನೇ ಸೆಕ್ಷನಿನಿಂದ ಪುಂಟೂದ ಅಧಿಕಾರದ ದೆಸೆಯಿಂದ ಮೈ|| ಯಫ್. ಬಿ. ಕ್ಲರ್ಕ್‌ಯವರು, ಮೈಸೂರ್ ಸಂಸ್ಥಾನದಲ್ಲಿ ಜಸ್ಟಿಸ್ ಆವ್ ದೀ
" ಪೀಸ್‌ರಾಗಿರತಕ್ಕದ್ದೆಂದು ಗೌರ್ನರ್ ಜನರಲ್ ಇನ್‌ಕೌನ್ಸಿಲ್ಲವರು ಅಪ್ಪಣೆ ಕೊಡಿಸಿರುತ್ತಾರೆ.

ತಾರೀಖು 31ನೇ ಅಕ್ಟೋಬರ್ 1889.

ನಂ. 226.—ಯಡೆಪಳ್ಳಿ ಜಿಪ್ಯುಟಿ ಅಮಲ್ದಾರ್ ಆಳಸಿಂಗ್ಯಯ್ಯಂಗಾರ್ ಯವರಿಗೆ, 1889ನೇ ಇಸವಿ ಫಿಬ್ರವರಿ 5ನೇ ಮತ್ತು ಂ 7140–71—200ನೇ ನಂಬರ್ ಪ್ರೊಸೀಡಿಂಗ್ಸಿನಲ್ಲಿ ಪ್ರಕಟಿಸಿರೋಣಾದ ರೂಲ್ಸಿನ 1ನೇ ಕಲಮನುಸರಿಸಿ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 5 ದಿವಸಗಳ ಕ್ಯಾಜ್ಯುಯಲ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 1ನೇ ನವಂಬರ್ 1889.

ನಂ. 227.—ಕಡೂರು ಡಿಸ್ಟ್ರಿಕ್ಟ್ ಸಿವಿಲ್ ಸರ್ಜನ್ ಮೈ|| ಡಬ್ಬಿಯು. ಜೇ. ಲಿಂಕ್ಲೆಯವರಿಗೆ, 1889ನೇ ಇಸವಿ ನವಂಬರು ಗುರೇ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 28ನೇ ಅಕ್ಟೋಬರ್ 1889.

ನಂ. 217.—ಸ್ರ 1870ನೇ ಇಸವಿಯ Xನೇ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ಸೆಕ್ಷನ್ ಅನುಸರಿಸಿ ಅದರಿಂದ ತಿಳಿಯಪಡಿಸುವದೇನಂದರೆ, ಇದರಡಿ ಕಂಡ ತಪ್ಪೆಯಲ್ಲಿ ನಮೂದಾಗುವ ಜಮೀನು ಸರ್ಕಾರದ ಕೆಲಸಕ್ಕಾಗಿ ಅಂದರೆ ಬೆಂಗಳೂರಲ್ಲಿರುವ ಲಾಲ್ ಬಾಗ್ ಬಡಾಯಿಸತಕ್ಕ ಬಗ್ಯಾಗಿ ಬೇಕಾಗಿರುತ್ತದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ.	ಹಿಸ್ಸೇದಾರನ ಹೆಸರು.	ಜಮೀನಿನ ತಪಶೀಲು,					ಚವುತರ್ಫ್.
				ತರಹಿ.	ನಂಬರು.	ಬೇಕಾಗಿರುವ ವಿಸ್ತೀರ್ಣ.	ಕಂದಾಯ.		
						ಎ. ಗುಂಟೆ.	ರೂ.	ಆ.	ಪೈ.
ಬೆಂಗಳೂರು	ಬೆಂಗಳೂರು	ಅಜ್ಜಿಪುರ	ಅಪ್ಪರೆಡ್ಡಿ	ಖುಷ್ಕಿ	ಸ್ಯೇ ನಂಬರು 17	0—20 ವ ಭಂಡೀಮೋಟು, ಭಾವಿಗಳು ಗಿಡಗಳು ವಗೈರ	0	12	0	ಉತರಕ್ಕೆ—ಸರ್ಕಾರ ರಸ್ತೆ ದಕ್ಷಿಣಕ್ಕೆ—ಸರ್ಕಾರ ಲಾಲ್ ಬಾಗಿಗೆ ಬೇರಿದ ಜಮೀನು ಪೂರ್ವಕ್ಕೆ—ತಿಪ್ಪಾಪುರಕ್ಕೆ ಹೋಗುವ ದಾರಿ ಪಶ್ಚಿಮಕ್ಕೆ—ಸರ್ಕಾರದ ಲಾಲ್‌ಬಾಗು

ನಂ. 218.—ಸ್ರ 1870ನೇ ಇಸವಿಯ Xನೇ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ಸೆಕ್ಷನ್ ಅನುಸರಿಸಿ ಇದರಿಂದ ತಿಳಿಯಪಡಿಸುವದೇನಂದರೆ,—ಇದರಡಿ ಕಂಡ ತಖ್ತೆಯಲ್ಲಿ ನಮೂದಾಗುವ ಜಮೀನು ಸರ್ಕಾರದ ಕೆಲಸಕ್ಕಾಗಿ ಅಂದರೆ, ಅಜ್ಜಂಪುರದ ಗ್ರಾಮ ನಿವೇಶನವನ್ನು ಬಡಾಯಿಸತಕ್ಕ ಬಗ್ಯಾಗಿ ಬೇಕಾಗಿರುತ್ತದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬ್ಳಿ.	ಗ್ರಾಮ.	ಹಿಡುವಳಿದಾರರ ಹೆಸರು.	ಜಮೀನು	ತರಹಿ ವ ನಂಬರ್.	ಬೀಜವರಿ.	ಕಂದಾಯ.			ಷರಾ.
							ಎ. ಗುಂಟೆ	ರೂ.	ಆ.	ಪೈ.	
ಕಡೂರು	ತರೀಕೆರೆ	ಅಜ್ಜಪುರ	ಅಜ್ಜಂಪುರ	ಪೈ ದೊಡ್ಡಬೇವರ			8—7	8	8	0	ಈ ಪೂರಾ ನಂಬರು ಬೇಕಾಗಿರುತ್ತದೆ
				ಪೈ ನಾಡಿಗ ರಾಘ			I—31	1	8	0	
				ಜುಮ್ಲಾ			9—38	10	0	0	

ತಾರೀಖು 18ನೇ ಆಕ್ಟೋಬರ್ 1889

ಕ್ಯಾಂಪ್ ನಂ. 584—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 357ನೇ ಸೆಕ್ಷನ್ ಅನುಸರಿಸಿ, ಮಾಲೂರು ತಾಲ್ಲೂಕು ಅಮಲ್ದಾರ್ ವ ನೇ ಕ್ಲಾಸ್ ಮಾಜಿಸ್ಟ್ರೇಟರಾದ ರಾಜಗೋಪಾಲಾಚಾರ್ಯುಲವರು, ಸಾಕ್ಷಿಗಳ ಕೈಫೀಯತನ್ನು ಕನ್ನಡ ಭಾಷೆಯಲ್ಲಿ ಸ್ವದಸ್ತೂರು ತೆಗದುಕೊಳ್ಳಲಿಕ್ಕೆ ಅಪ್ಪಣೆ ಕೊಡಲ್ಪಟ್ಟಿರುತ್ತಾರೆ.

ತಾರೀಖು 21ನೇ ಡಿಕಂಬರ್ 1888.

ಕಾರ್ಯಾರ್ಥ ದಿವಾನರವರನ್ನು, ಭೇಟಿ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಶುಕ್ರವಾರಗಳಲ್ಲಿ ಮಧ್ಯಾನ್ಹಾತ್ಪರ 2 ಘಂಟೆಗೆ ಕಛೇರಿಗೆ ಬರತಕ್ಕದ್ದು. ಈ ಬಗ್ಯಾಗಿ ಹಿಂದಿನ ದಿನ ಚೀಫ್ ಸೆಕ್ರಿಟರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಬೆಂಗಳೂರು ಆಫೀಸಿನಲ್ಲಿ ಯಿಡಲ್ಪಟ್ಟಿರುವ ಅರ್ಜಿಪೆಟ್ಟಿಗೆಯು ದಿನವಹೀ ಚೀಫ್ ಸೆಕ್ರಿಟರಿಯವರಿಂದಲೂ, ಅವರು ಬೆಂಗಳೂರಲ್ಲಿ ಯಿಲ್ಲದ ಕಾಲದಲ್ಲಿ ಅಂಡರ್ ಸೆಕ್ರಿಟರಿಯವರಿಂದಲೂ ಮಧ್ಯಾನ್ಹ 12 ಘಂಟೆಗೆ ತೆಗಿಯಲ್ಪಟ್ಟು ಅದರಲ್ಲಿನ ಅರ್ಜಿಗಳು ತೆಗದುಕೊಳ್ಳಲ್ಪಡುವದು.

3. ಅರ್ಜೀದಾರರುಗಳು ಶುಕ್ರವಾರ ದಿವಸ ಮಧ್ಯಾನ್ಹಾತ್ಪರ 3 ಘಂಟೆಗೆ ಕಛೇರಿಯಲ್ಲಿ ಕೇಳಲ್ಪಡುವರು.

ಖವೋಜೇಬ್ ಹುಕುಂ,
ಆರ್. ವಿಜಯಾಂಬ್ರರಾವ್,
ಚೀಫ್ ಸೆಕ್ರಿಟರಿ.

ದಿವಾನರವರು, ಅವರ ಭೇಟಿ ಮಾಡಲಿಚ್ಛೈಯುಳ್ಳ ದೊಡ್ಡ ಮನುಷ್ಯರುಗಳನ್ನು ಪ್ರತಿ ಶನಿವಾರದ ದಿವಸ ಮಧ್ಯಾನ್ಹ 12 ಲಾಗಾಯತು 2 ಘಂಟೆ ಪರಿಯಂತ ತಮ್ಮ ವಾಸಸ್ಥಾನದಲ್ಲಿ ಬರಮಾಡಿಕೊಳ್ಳುವರು.

ನೇಟಿವ್ ದೊಡ್ಡ ಮನುಷ್ಯರುಗಳು ಆವರಿಗೆ ಯಿಷ್ಟವಿರುವ ಪಕ್ಷಕ್ಕೆ ಅದೇ ದಿವಸ ಮಧ್ಯಾನ್ಹಾತ್ಪರ 2

ಕೆ. ದೊರಸ್ವಾಮಿಅಯ್ಯಂ